**O. S. No:20/2021**
**DW :2**

(ಇಂದು ದಿನಾಂಕಃ **13-03-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು ಶ್ರೀ ಜಿ ಎನ್ ಜೆ ವಕೀಲರಿಂದಃ**

ನಮ್ಮೂರಿನಿಂದ ಮೊರಬ 6 ರಿಂದ 7 ಕಿ.ಮೀ. ಆಗುತ್ತದೆ. ನಾನೇನು 1 ನೇ ಪ್ರತಿವಾದಿಯ ಸಂಬಂಧಿಕನಲ್ಲ. ಪ್ರತಿವಾದಿಯ ಮನೆಯ ಹತ್ತಿರ ನನ್ನ ಅಥವಾ ನನ್ನ ಸಂಬಂಧಿಕರ ಮನೆಗಳು ಇಲ್ಲ. ಪ್ರತಿವಾದಿಯ ಜಮೀನುಗಳಿಗೆ ಹೊಂದಿಕೊಂಡಂತೆ ನನ್ನ ಜಮೀನು ಇದೆ. ನನ್ನ ಜಮೀನಿನ ಸರ್ವೇ ನಂಃ 19. ನನಗೆ ಪ್ರತಿವಾದಿ 1 ನೇಯವರ ತಂದೆ ತಾಯಿಯ ಬಗ್ಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ದಾವಾ ಸ್ವತ್ತುಗಳು ಅವರುಗಳಿಗೆ ತವರು ಮನೆಯ ಸ್ವತ್ತು. 1 ನೇ ಪ್ರತಿವಾದಿಗೆ ಅವರ ತಾಯಿಯಿಂದ ದಾವಾ ಜಮೀನು ಬಂದಿತ್ತು. ಆ ಬಗ್ಗೆ ನಾನೇನು ಯಾವುದೇ ದಾಖಲೆಯನ್ನು ನೋಡಿಲ್ಲ . 1 ನೇ ಪ್ರತಿವಾದಿ ಹೇಳಿದ್ದರ ಮೇರೆಗೆ ನಾನು ಆ ರೀತಿ ಹೇಳುತ್ತಿದ್ದೇನೆ. ಫಕೀರವ್ವಳಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದು ಗೊತ್ತಿಲ್ಲ. ನನಗೆ 1 ನೇ ಪ್ರತಿವಾದಿಯು ಒಳ್ಳೆಯ ರೀತಿಯಲ್ಲಿ ಪರಿಚಯವಿದ್ದಾರೆ ಎಂದರೆ ಸರಿ. ನಾನಾಗಿಯೇ ನ್ಯಾಯಾಲಯಕ್ಕೆ ಬಂದಿದ್ದೇನೆ. ನನಗೆ ಸರ್ವೇ ನಂಃ 42/1 ಎ, 43/1 ಎಷ್ಟು ಕ್ಷೇತ್ರಗಳಿವೆ ಎಂದು ಗೊತ್ತಿಲ್ಲ. ನನಗೆ ವಾದಿ ಪ್ರತಿವಾದಿಯವರ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು ಯಾರಿಂದ ಯಾರಿಗೆ ಬಂದವು ಎನ್ನುವ ಬಗ್ಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಯವರು ನನ್ನನ್ನು ಸಾಕ್ಷಿ ಹೇಳುವಂತೆ ಕೋರಿದ್ದಕ್ಕೆ ನಾನು ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**

(ಇಂದು ದಿನಾಂಕಃ **13-03-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು ಶ್ರೀ ಜಿ ಎನ್ ಜೆ ವಕೀಲರಿಂದಃ**

ನನಗೆ ಈ ಕೇಸು ಯಾರು ಹಾಕಿದರು ಗೊತ್ತಿಲ್ಲ. ಮಲ್ಲನಗೌಡರ ವಿರುದ್ಧ ಕೇಸು ಹಾಕಿರುತ್ತಾರೆ. ಯಾವ ಕಾರಣಕ್ಕೆ ದಾವಾ ಮಾಡಿರುತ್ತಾರೆ ಗೊತ್ತಿಲ್ಲ. ಮೊರಬ ಗ್ರಾಮದಲ್ಲಿ ನನ್ನ ಯಾವುದೇ ಮನೆಗಳು ಇಲ್ಲ. ಪ್ರತಿವಾದಿ 1 ನನ್ನ ಓಣಿಯವರು. ಪ್ರತಿವಾದಿ 1 ನೇಯವರ ಮನೆ ನಂಬರ ಗೊತ್ತಿಲ್ಲ. ಆ ಮನೆಯ ಚೆಕ್ಕುಬಂದಿ ನನಗೆ ಈಗ ಹೇಳಲು ಬರುವುದಿಲ್ಲ. ನನಗೆ 1 ನೇ ಪ್ರತಿವಾದಿಯ ತಂದೆ ತಾಯಿ ಬಗ್ಗೆ ಗೊತ್ತಿಲ್ಲ . 1 ನೇಯ ಪ್ರತಿವಾದಿಯ ತಂದೆಗೆ ಎಷ್ಟು ಜಮೀನುಗಳಿದ್ದವು ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದು ಗೊತ್ತಿಲ್ಲ. ದಾವೆಯಲ್ಲಿ ಒಟ್ಟು ಎಷ್ಟು ಜಮೀನುಗಳಿವೆ ಎಂದು ಗೊತ್ತಿಲ್ಲ . ನಾನೇನು ವಕೀಲರಿಗೆ ಜಮೀನುಗಳ ನಂಬರ ಬಗ್ಗೆ ಮಾಹಿತಿ ಕೊಟ್ಟಿರುವುದಿಲ್ಲ . 1 ನೇ ಪ್ರತಿವಾದಿ ದಾವಾ ಸ್ವತ್ತಿನ ಬಗ್ಗೆ ಏನು ಕಾಗದ ಪತ್ರಗಳನ್ನು ಮಾಡಿದ್ದಾರೆ ಗೊತ್ತಿಲ್ಲ . ಪ್ರತಿವಾದಿಯರು ನನಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ದಾಖಲೆಗಳನ್ನು ತೋರಿಸಿರುವುದಿಲ್ಲ . ನಾನೇನು ವಕೀಲರಿಗೆ ದಾವಾ ಜಮೀನುಗಳ ದಾಖಲೆ ನೋಡಿದ ಬಗ್ಗೆ ಮಾಹಿತಿ ಕೊಟ್ಟಿರುವುದಿಲ್ಲ . ಪ್ರತಿವಾದಿಯವರೊಂದಿಗೆ ನನ್ನ ಒಡನಾಟ ಚೆನ್ನಾಗಿದೆ ಎಂದರೆ ಸರಿ. ಪ್ರತಿವಾದಿಯವರು ಕೋರ್ಟನಲ್ಲಿ ನ್ಯಾಯ ನಡೆದಿದೆ ಸಾಕ್ಷಿ ಹೇಳಿ ಎಂದು ಹೇಳಿದ್ದರು ಎಂದರೆ ಸರಿ . ನಾನೇನು ದಾವಾ ಜಮೀನುಗಳಿಗೆ ಸಂಬಂಧಪಟ್ಟಂತೆ ಮೃತ್ಯು ಪತ್ರವನ್ನು ನೋಡಿರುವುದಿಲ್ಲ . ದಾವೆ ಹಾಕಿದವರ ಪರಿಚಯ ನನಗೆ ಇಲ್ಲ. ನಾನು ಪ್ರತಿವಾದಿಯವರ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**